ಛೇರ್ಮನ್: ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 4 ಗಂಟೆ 30 ನಿಮಿಷ 11 ಸೆಕೆಂಡಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 21ನೇ ಫೆಬ್ರವರಿ, 2007ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ–1

979 (1177) ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ): ಮಾನ್ಯ ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳೆಷ್ಟು;

ಆ) ಅದರಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು;

ಇ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 5652.

ಆ) ಗ್ರೇಡ್–1 ವೃಂದದಲ್ಲಿ 158
ಗ್ರೇಡ್–2 ವೃಂದದಲ್ಲಿ 183
ಒಟ್ಟು **341**

ಇ) ಖಾಲಿ ಹುದ್ದೆಗಳನ್ನು ಬಡ್ತಿ ಮತ್ತು ನೇರ ನೇಮಕಾತಿ ಮೂಲಕ ತುಂಬಲು ಕ್ರಮ ವಹಿಸಲಾಗುತ್ತಿದೆ.

980 (1178) ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ): ಮಾನ್ಯ ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಗಳ ಅಡಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ತೆಗೆದುಕೊಂಡ ರಸ್ತೆಗಳು ಯಾವುವು (ವಿವರ ನೀಡುವುದು);